**ಭೂ-ಉಪಯೋಗ ಬದಲಾವಣೆಮಹಾಯೋಜನೆಯಲ್ಲಿ ಪ್ರಸ್ತಾಪಿಸಿದ ಜಮೀನಿನ ಭೂ-ಉಪಯೋಗ ಬದಲಾವಣೆಯ ವಿಧಾನ**

**(ಕೆ.ಟಿ.ಸಿ.ಪಿ ಕಾಯ್ದೆ, 1961 ಕಲಮ 14(ಎ) ರಡಿಯಲ್ಲಿ)**

1. ಭೂ-ಬದಲಾವಣೆ ಪ್ರಸ್ತಾಪಿಸಿರುವ ಜಮೀನಿನ ಮಾಲೀಕನು ಅಭಿವೃದ್ಧಿಪಡಿಸಲು ಉದ್ದೇಶಿಸಿದಲ್ಲಿ, ತಾನು ಇಚ್ಚಿಸಿದ ಉಪಯೋಗಕ್ಕೆ ಬದಲಾಗಿ ಬೇರೆ ಉಪಯೋಗಕ್ಕೆ ಮಹಾಯೋಜನೆಯಲ್ಲಿ ಕಾಯ್ದಿರಿಸಿದ್ದಲ್ಲಿ ಆತನು ಸಂಬಂಧಿಸಿದ ಯೋಜನಾ ಪ್ರಾಧಿಕಾರಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ಅಥವಾ 69(3) ರಡಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಬೇಕು.
2. ಪ್ರಾಧಿಕಾರವು ಸರ್ಕಾರದ ಮಾರ್ಗಸೂಚಿಯನ್ವಯ ಪರಿಶೀಲಿಸಿ,ಯೋಜನಾ ತತ್ವಗಳಿಗನುಗುಣ ವಾಗಿರುವುದನ್ನು ಹಾಗೂ ಸಾರ್ವಜನಿಕ ಹಿತಾಸಕ್ತಿ ಒಳಗಂಡಿದ್ದಲ್ಲಿ ಸ್ಥಳೀಯ ದಿನ ಪತ್ರಿಕೆಯಲ್ಲಿ ಪ್ರಕಟಿಸಿ ಸಾರ್ವಜನಿಕರಿಗೆ 15 ದಿನಗಳ ಅವಕಾಶ ನೀಡಿ ಪರಿಶೀಲಿಸಬೇಕು.
3. ನಂತರ ಪ್ರಾದಿಕಾರವು ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಭೂ-ಬದಲಾವಣೆಯನ್ನು ಅಂಗೀಕರಿಸಿ, ಸಕಾರಣಗಳನ್ನು ದಾಖಲಿಸಿ ಪ್ರಸ್ತಾವನೆಯನ್ನು ಪರಿಗಣಿಸಿರುವ ಬಗ್ಗೆ ಸೂಕ್ತ ನಿರ್ಣಯ ಕೈಗೊಳ್ಳಬೇಕು.
4. ಭೂ-ಬದಲಾವಣೆಗೆ ಪರಿಗಣಿಸಲಾದ ಪ್ರಕರಣವನ್ನು ಪ್ರಾಧಿಕಾರವು ನಗರ ಮತ್ತು ಗ್ರಾಮಾಂತರ ನಿರ್ದೇಶಕರಿಗೆ ಸಂಬಂಧಪಟ್ಟಂತೆ ಪ್ರಕರಣವನ್ನು ಸರ್ಕಾರದ ಆದೇಶಕ್ಕಾಗಿ ಸಲ್ಲಿಸಬೇಕು.
5. ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14 ಎ (3) ಪ್ರಕಾರ ಭೂ-ಬದಲಾವಣೆಯು/ಅಭಿವೃದ್ಧಿಯು ವಾಣಿಜ್ಯ ಅಥವಾ ಕೈಗಾರಿಕಾ ಉದ್ದೇಶದಿಂದ ವಸತಿ ಉದ್ದೇಶಕ್ಕಾಗು ಅಥವಾ ಕೈಗಾರಿಕೆಯಿಂದ ವಾಣಿಜ್ಯಕ್ಕಾಗಿ ಪ್ರಸ್ತಾಪಿಸಿದ್ದಲ್ಲಿ ಸಂಬಂದಿಸಿದ ಅರ್ಜಿದಾರರಿಂದ ನಿಗಧಿತ ಶುಲ್ಕ ಪಾವತಿಸಿಕೊಂಡು ಭೂ-ಬದಲಾವಣೆಗೆ ಕಲಂ 14 (ಎ) (3)ರಡಿ ಕ್ರಮ ವಹಿಸಬೇಕು.

**ಭೂ-ಬದಲಾವಣೆಗೆ ಸಲ್ಲಿಸಬೇಕಾದ ದಾಖಲಾತಿಗಳ ಪಟ್ಟಿ**

1. ಕ್ರಯಪತ್ರ/ಪಾಲು ವಿಭಾಗ ಪತ್ರ, ಇತ್ತೀಚಿನ ಇಸಿ, ನಮೂನೆ 15&16
2. ಆರ್‌ಟಿಸಿ, ಮ್ಯುಟೇಶನ್ ಖಾತಾ ಪತ್ರ.
3. ಕಂದಾಯ ಪಾವತಿ ರಸೀದಿ.
4. ಮೂಲ ಸರ್ವೆ ಸ್ಕೆಚ್, (ಎಲ್ಲಾ ಅಳತರಗಳ್ಳುಳ್ಳ) ಗ್ರಾಮ ನಕ್ಷೆ ಸಂಬಂದಿಸಿದ ಪ್ರಾಧಿಕಾರದಿಂದ ದೃಢೀಕರಿಸಿದ ಆಕಾರ್‌ಬಂದ್.
5. ಜಮೀನಿನ ಅಂಚಿನಿಂದ 100 ಮೀ ವರೆಗಿನ ಅಭಿವೃದ್ಧಿಗಳನ್ನು ತೋರಿಸುವ, ಟೋಟಲ್ ಸ್ಟೇಷನ್ ಸರ್ವೆಯಿಂದ ತಯಾರಿಸಲಾದ ಸ್ಥಳನಕ್ಷೆ.

6. ಕಂದಾಯ ಇಲಾಕೇಯ 79(ಎ), (ಬಿ)ಬಗ್ಗೆ ದಾಖಲೆ.
7. ಪ್ರಶ್ನಿತ ಜಮೀನಿನ ಸುತ್ತಲಿನ ವಿವರಗಳನ್ನು ತೋರಿಸುವ ಜಮೀನಿನ ಅಂಚಿನಿಂದ (100 ಮೀ ವರೆಗಿನ) ಗೂಗಲ್ ನಕ್ಷೆ.
8. ಸಂಪರ್ಕ ರಸ್ತೆ ವಿವರಗಳನ್ನು ರಸ್ತೆಯ ವರ್ಗ, ಅಗಲ, ಎಲ್ಲಿಂದ ಎಲ್ಲಿಗೆ ಹೊರಡುವ ರಸ್ತೆ ಇತ್ಯಾದಿ.
9. ಪ್ರಸ್ತಾವಿತ ಜಮೀನನ್ನು ತೋರಿಸುವ ಮಹಾಯೋಜನೆಯ ಉದ್ಧೃತ ಭಾಗದ ನಕ್ಷೆ.